ದಯಪಾಲಿಸಿದ್ದರೆ ಈ ನನ್ನ ಸದಾಶಿವನನ್ನು 'ನೀನೇ ನೋಡಿಕೋ ಮಗಳೇ' ಎಂದು ಅವಳಿಗೆ ಹೇಳುತ್ತಿದ್ದೆ ಎನ್ನುತ್ತಿದ್ದಳು. ಆಗ ದೊಡ್ಡಣ್ಣ 'ಕ್ಯಾರೇ' ಎನ್ನದೆ ಗುಣುಗುಣಿಸಿ ಹೋದದ್ದನ್ನು ನಾನು ಈಗಲೂ ಮರೆತಿಲ್ಲ' ಎಂದರು.

ಅಷ್ಟರಲ್ಲಿ ರಾಯರು 'ನಾವು ಇದನ್ನೇ ಮಾತನಾಡುತ್ತಾ ಕುಳಿತರೆ ನಮ್ಮ ಈ ದಿನದ ವಾಕಿಂಗ್ ಇಲ್ಲ ಎಂಬಂತಾಗುತ್ತದೆ ಶೆಟ್ಟರೇ. ನಿನ್ನೆಯೂ ಆ ಗಲಾಟೆಯ ನೆಪದಲ್ಲಿ ನಮ್ಮ ವಾಕಿಂಗ್ ಆಗಿಲ್ಲ. ಈವೊತ್ತಾದರೂ ವಾಕಿಂಗ್ ಹೋಗಬೇಕಲ್ಲ?' ಎಂದರು.

'ಹೌದೌದು. ಅದೆಲ್ಲಾ ಇನ್ನೊಮ್ಮೆ ಹೇಳ್ತೀನೆ ಸರೋಜಕ್ಕ. ನೀವು ನನ್ನ ವಿಚಾರ ಕೇಳಿದರೆ ಹೀಗೂ ಇದೆಯೇ ಎಂದುಕೊಳ್ಳಬೇಕು! ಅಂಥ ವಿಚಾರಗಳು ಇನ್ನೂ ಇವೆ' ಎನ್ನುತ್ತಾ ಶೆಟ್ಟರು ಮೇಲೆದ್ದರು.

ಇಬ್ಬರೂ ನಡೆಯುತ್ತಾ ಸುಮಾರು ನೂರು ಮೀಟರಿನಷ್ಟು ದಾರಿ ಸಾಗಿದ ಮೇಲೆ ರಾಯರು 'ಶೆಟ್ಟರೇ ನನಗೆ ಮೊನ್ನೆ ಸಂಜೆ ಜಯಂತಿ ಕುಲಕರ್ಣಿ ಅವರಿಂದ ಒಂದು ಪತ್ರ ಬಂದಿತ್ತು ಮಾರಾಯರೇ. ಅದನ್ನು ಓದಿ ರಾಂಪುರಕ್ಕೆ ನಾನು ಮತ್ತೆ ಹೋಗಬೇಕಾಗುತ್ತದಲ್ಲ ಎಂಬ ಚಿಂತೆ ಹತ್ತಿತ್ತು. ಯಾಕೆಂದರೆ ಈ ನಿಮ್ಮ ಸರೋಜಕ್ಕನಿಗೆ ಜಯಂತಿ ಕುಲಕರ್ಣಿ ಅಂದರೆ ಅಲರ್ಜಿ. ಒಂದೆರಡು ವರುಷಗಳಿಂದ ಅಲ್ಲ. ಅವಳು ನಮ್ಮ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಬಂದಂದಿನಿಂದ! ಯಾಕೆ ಅಂದರೆ ಈ ತನಕವೂ ನನಗೆ ಅರ್ಥ ಆಗಿಲ್ಲ. ಈ ವಿಚಾರದಲ್ಲಿ ನಾನೊಮ್ಮೆ ಮಾನಸಿಕ ತಜ್ಞರನ್ನು ಭೇಟಿಯಾಗಿ 'ಇದಕ್ಕೇನು ಮಾಡುವುದು ಸರ್' ಎಂದು ಕೇಳಿದ್ದಕ್ಕೆ ಅವರು ಸಣ್ಣಗೆ ನಗುತ್ತಾ, 'ಕೆಲವು ಹೆಣ್ಮಕ್ಕಳಿಗೆ ಗಂಡಂದಿರಲ್ಲಿ ಸದಾ ಸಂಶಯ ಇರುತ್ತದೆ. ತಮ್ಮ ಗಂಡ ಬೇರೆ ಹೆಣ್ಮಕ್ಕಳಲ್ಲಿ ಮಾತನಾಡಬಾರದು, ಬೇರೆ ಹೆಣ್ಮಕ್ಕಳನ್ನು ನೋಡಬಾರದು ಅಥವಾ ಬೇರೆ ಹೆಣ್ಮಕ್ಕಳ ಬಗ್ಗೆ ಮೆಚ್ಚುಗೆಯ ಮಾತನಾಡಬಾರದು. ಅಷ್ಟೇ ಅಲ್ಲ, ಅಕಸ್ಮಾತ್ ಅಂಥದ್ದೆಲ್ಲ ಮಾಡಿದರೆ ತನ್ನ ಗಂಡ ಲಂಪಟ, ತನ್ನನ್ನು ಯಾವತ್ತಾದರೂ ಒಂದು ದಿನ ದೂರ ಸರಿಸಬಹುದು ಎಂಬ ಅಭದ್ರತೆ ಅಂಥವರನ್ನು ಕಾಡುತ್ತಿರುತ್ತದೆ. ಹಾಗಾಗಿ ಇದಕ್ಕೆ ಪರಿಹಾರ ಅಂದರೆ ನೀವು ನೀವೇ ಪರಸ್ಪರ ಚರ್ಚಿಸಿ ಪರಿಹರಿಸಿಕೊಳ್ಳುವುದು ಅಥವಾ ನಿಮ್ಮ ಹೆಂಡತಿಯ ಮುಂದೆ ಪಸ್ತ್ರೀಯರ ಬಗ್ಗೆ ಮೆಚ್ಚುಗೆ ಇಲ್ಲವೇ ಅವರ ಜೊತೆ ಹೆಚ್ಚು ಮಾತುಕತೆ ಆಡದಿರುವುದು' ಎಂದಿದ್ದರು.

ನನಗೆ ಇದನ್ನು ಯಾವ ರೀತಿ ಸರೋಜಳಲ್ಲಿ ಚರ್ಚಿಸಬೇಕು ಎಂದು ತಿಳಿಯದೆ ಸುಮ್ಮನಿದ್ದೆ. ಆಕಸ್ಮಿಕವಾಗಿ ಜಯಂತಿ ಎಂಬ ಹೆಸರು ನನ್ನ ನಾಲಿಗೆಯಲ್ಲಿ ಬಂದರೆ ಆ ದಿನ ಸರೋಜಳ ಮುಖದಲ್ಲಿ ಬಾವು ಬರುತ್ತಿತ್ತು ಅಥವಾ ಮಾತುಕತೆ ತೀರಾ ಕಡಿಮೆಯಾಗುತ್ತಿತ್ತು. ಒಂದು ಸಂದರ್ಭದಲ್ಲಿ ನಮ್ಮ ಕಾಲೇಜಿನ ಕನ್ನಡ ಸಂಘದ ಕಾರ್ಯದರ್ಶಿಯಾಗಿ ಜಯಂತಿ ಆಯ್ಕೆಯಾಗಿದ್ದಾಗ, ಇನ್ನು ಸಂಘಕ್ಕೆ ಹೊಸ ಆಯಾಮ ಬರಬಹುದು ಎಂದು ನಾನು ಸರೋಜಳಲ್ಲಿ ಆಡಿದ್ದಕ್ಕೆ 'ಮಜಾ ಮಾಡಲು ಇನ್ನು ನಿಮಗೆ ಒಳ್ಳೆದಾಯಿತು. ಈಗ ವಾರಕ್ಕೊಮ್ಮೆ ನೀವು ಅವಳ ಮನೆಗೆ ಹೋಗ್ತಾ ಇದ್ದೀರಿ. ಇನ್ನು ದಿನವೂ ನೀವು ಹೋಗಬಹುದು' ಎಂದು ಲೇವಡಿ ಮಾಡಿದ್ದಳು. ವಾಸ್ತವವಾಗಿ ಸರೋಜಳ ಈ ಅಸಹನೆಯೇ ಅವಳ ಅಸ್ತಮಾಕ್ಕೆ ಕಾರಣವಾಗಿರಬಹುದು. ರಾಂಪುರದ ಹವೆ ಅಲ್ಲ; ಇದು ನನ್ನ ಮಾತಲ್ಲ. ಮನೋವೈದ್ಯರೇ ಹೇಳಿದ್ದು. ಸೋ ಅವಳು ಮೇಲಿಂದ ಮೇಲೆ ನಾವು ರಾಂಪುರದಿಂದ ಹೋಗೋಣ ಅಂದಾಗ ನಾನು ನಿವೃತ್ತನಾಗುವ ತನಕ ಕಾಯಬೇಕಾಗಿತ್ತು. ನಿವೃತ್ತಿಯ ನಂತರ ಉದ್ಯೋಗದ ಅವಕಾಶ ಇದ್ದರೂ ಬೇಡ ಎಂದೇ ಯೋಚಿಸಿ ಅವಳ ನಿರ್ಧಾರವನ್ನು ಒಪ್ಪಿದೆ. ಅದೇ ಹೊತ್ತಿಗೆ ನೀವೂ ರಾಂಪುರದಿಂದ ಹೊರಡುವ ಸೂಚನೆ ಕೊಟ್ಟರಿ ಮತ್ತು ನಿಮ್ಮ ಮನೆಯ ಹತ್ತಿರವೇ ಸಿದ್ಧವಾಗುತ್ತಿದ್ದ ಮನೆಯೊಂದನ್ನು ನಮಗೆ ವಿಕ್ರಯಿಸಿಕೊಟ್ಟು ಉಪಕರಿಸಿದಿರಿ' ಎಂದರು.

ಶೆಟ್ಟರು ಮಾತನಾಡಲಿಲ್ಲ.

ರಾಯರು ಜಯಂತಿ ಕುಲಕರ್ಣಿಯ ಪತ್ರವನ್ನು ತಮ್ಮ ಜೇಬಿನಿಂದ ತೆಗೆದು ಶೆಟ್ಟರ ಕೈಗಿಟ್ಟರು. ಶೆಟ್ಟರು ಮುಜುಗರಪಡುತ್ತಾ 'ರಾಯರೇ ಇದು ನಿಮಗೆ ಬಂದ ಪತ್ರ, ಇದನ್ನು ನಾನು ಓದುವುದು ಎಷ್ಟು ಸರಿ?' ಎಂದು ಪತ್ರವನ್ನು ಬಿಡಿಸದೇ ಹಿಂದಿರುಗಿಸಲು ಮುಂದಾದರು.

ರಾಯರು ತನ್ನ ಕುತ್ತಿಗೆಯಷ್ಟೂ ಎತ್ತರವಿರದಿದ್ದ ಶೆಟ್ಟರನ್ನು ತನ್ನಾಚೆ ಎಳೆದುಕೊಂಡು ಅವರ ಬೆನ್ನನ್ನು ಹದವಾಗಿ ತಟ್ಟಿ, 'ಇದೇನು ಲವ್ ಲೆಟರಾ ಶೆಟ್ರೇ? ಇಷ್ಟಕ್ಕೂ ಈ ವಯಸ್ಸಿನಲ್ಲಿ ಅಂಥ ಹುಡುಗಾಟ ಎಲ್ಲಿರುತ್ತದೆ ಹೇಳಿ?' ಎನ್ನುತ್ತಾ 'ನೀವೂ ಸರೋಜಳ ಹಾಗೆ ನನ್ನನ್ನು ಸಂಶಯದಿಂದ ನೋಡುತ್ತೀರಲ್ಲ?' ಎಂದು ಚಟಾಕಿ ಹಾರಿಸಿದರು.

ಶೆಟ್ಟರು ಹೆಜ್ಜೆಗಳನ್ನು ನಿಧಾನಗೊಳಿಸಿ ಪತ್ರವನ್ನು ಪೂರ್ತಿ ಓದಿದರು. 'ಇಲ್ಲ ರಾಯರೇ, ನೀವು ರಾಂಪುರಕ್ಕೆ ಹೋಗಿ ಜಯಂತಿಯವರನ್ನು ಸಂತೈಸಬೇಕು! ನಾವು ಈಗ ಎಷ್ಟೇ ದೂರದಲ್ಲಿದ್ದರೇನು, ಸುಮಾರು ಎರಡು ಮೂರು ದಶಕದಿಂದ ನಾವೂ ಅವರೂ ಬಂಧುಗಳ ಹಾಗೆ ಇದ್ದವರು ತಾನೇ?' ಎಂದರು.

'ಹ್ಞೂ ನನಗೂ ಹಾಗೆ ಅನಿಸುತ್ತದೆ ಶೆಟ್ಟರೇ. ಬಟ್ ಸರೋಜಳಿಗೆ ರಾಂಪುರಕ್ಕೆ ಹೋಗುತ್ತೇನೆ ಅಂದರೆ ಖಂಡಿತ ಸಿಟ್ಟು ಬರುತ್ತದೆ. ಆಕೆ ಮತ್ತೆ ರಾದ್ಧಾಂತ ಮಾಡಿಯೇ ಮಾಡುತ್ತಾಳೆ'.

ಶೆಟ್ಟರು 'ಅದು ಹೌದು! ಆದರೆ ಮೊನ್ನೆ ರಾತ್ರೆಯ ಘಟನೆಯ ನಂತರ ಈಗ ಆಕೆ ಬದಲಾಗಿರಬಹುದು. ಯಾಕೆಂದರೆ ಈಗ ಆಕೆಯೇ ಊರು ಬಿಟ್ಟು ಹೋಗೋಣ ಅನ್ನುತ್ತಿದ್ದಾರಲ್ಲ? ಆದರೆ ಎಲ್ಲಿಗೆ ಎಂದು ಆಕೆ ನನ್ನಲ್ಲಿ ಹೇಳಲಿಲ್ಲ. ರಾಂಪುರಕ್ಕೆ ಹೋದರೆ ಹೇಗೆ ಎಂದು ನಾಳೆ ನೀವು ನನ್ನ ಎದುರೇ ಆಕೆಯನ್ನು ಕೇಳಿ, ನಾನು ಆಗ 'ಅದೇ ಬೆಸ್ಟ್' ಎನ್ನುವುದಲ್ಲದೆ, 'ನಿಮಗೆ ಗೊತ್ತಿದ್ದ ಊರು. ಸಾಕಷ್ಟು ವರುಷ ಅಲ್ಲಿ ನೀವು ದುಡಿದಿದ್ದೀರಿ' ಎನ್ನುತ್ತೇನೆ. ಆಗಲೂ ಆಕೆ ಬೇಡ ಅಂದರೆ ಆ ಹನುಮಂತೇಶ್ವರ ಕಾಲೇಜಿನಲ್ಲಿ ನಿಮಗೆ ಆಹ್ವಾನ ಇದೆ ಅಂದಿದ್ದೀರಲ್ಲ ಅಲ್ಲಿಗೇ ಹೋಗಿ! ಅಲ್ಲಿ ಯಾವ ಹುದ್ದೆಯಾದರೂ ಸರಿಯೇ. ಸೇರಿಕೊಳ್ಳಿ. ಇನ್ನೈದು ವರುಷ ನೀವು ದುಡಿಯುವುದಕ್ಕೆ ಯಾವ ಆರೋಗ್ಯ ಸಮಸ್ಯೆಯೂ ಇಲ್ಲವಲ್ಲ? ನೀವು ಬಯಸುವುದಾದರೆ ನಾನೂ ಮತ್ತೆ ರಾಂಪುರಕ್ಕೆ ಬರುತ್ತೇನೆ. ಅಲ್ಲೊಂದು ಪೆಟ್ಟಿ ಶಾಪ್ ಪ್ರಾರಂಭಿಸುತ್ತೇನೆ, ಆಗದೇ?' ಎಂದರು.

ರಾಯರು ವಾಕಿಂಗನ್ನು ಮುಂದುವರಿಸುತ್ತಾ 'ಸರೋಜ ಹೇಗೆ ಇದನ್ನು ಸ್ವೀಕರಿಸುತ್ತಾಳೆ ಅಂತ ತರ್ಕಿಸುವುದು ಕಷ್ಟ ಶೆಟ್ಟರೇ. ಆದರೆ ನಾನೊಂದು ಮಾತು ಗಟ್ಟಿಯಾಗಿ ಹೇಳಬಹುದು. ನಾನು ಇಲ್ಲಿಂದ ಹೋಗೋದಾದರೆ ರಾಂಪುರಕ್ಕೆ ಮಾತ್ರ, ಅದೂ ನಿನಗೆ ಬೇಕಾದರೆ ಮಾತ್ರ ಎಂಬ ಕಂಡೀಷನ್ ಹಾಕುತ್ತೇನೆ ಆಗ ಆಕೆ ಏನು ನಿರ್ಧಾರಕ್ಕೆ ಬರುತ್ತಾಳೆ ಎಂದು ನೋಡೋಣ' ಎಂದರು.

ಈ ಮಾತುಕತೆ ಮತ್ತೆ ತಿರುವುಗಳನ್ನು ತೆಗೆದುಕೊಂಡು ಅಂತಿಮವಾಗಿ ನಾಳೆ ಮುಂಜಾನೆ ರಾಯರು ಊರು ಬಿಡುವುದರ ಪೂರ್ವ ತಯ್ಯಾರಿಯಾಗಿ ರಾಂಪುರಕ್ಕೆ ಹೋಗಿ ಬರುವುದು, ಅಲ್ಲಿ ಎಂಥೆಂಥ ಅವಕಾಶಗಳು ಇವೆ ಎಂದು ಪರಿಶೀಲಿಸುವುದು ಎಂಬಲ್ಲಿಗೆ ಬಂದು ನಿಂತಿತು.

ಆಗ ರಾಯರು 'ನಾನು ಜಯಂತಿಯಲ್ಲಿ ಮಾತನಾಡದೆ ತಿಂಗಳುಗಳೇ ಆಗಿದೆ ಶೆಟ್ರೇ. ನಾನು ಇಲ್ಲಿ ಮನೆಯಲ್ಲಿದ್ದಾಗ ಆಕೆಯಲ್ಲಿ ಮಾತನಾಡಲೇಬಾರದು ಎಂದುಕೊಂಡಿದ್ದೇನೆ, ಆಕೆಗೂ ನೀನು ನನಗೆ ಫೋನು ಮಾಡುವುದಕ್ಕಿಂತ ಒಂದು ಪತ್ರ ಬರೆದು ಹಾಕಿದರೆ ನಾನು ರೆಸ್ಪಾನ್ಸ್ ಮಾಡುತ್ತೇನೆ ಎಂದಿದ್ದೆ. ಈ ಒಂದು ವರುಷದಲ್ಲಿ ಅಂಥ ಸಂದರ್ಭ ಆಕೆಗೆ ಬಾರದಿದ್ದುದರಿಂದ ನನಗೆ ಆಕೆ ಪತ್ರ ಬರೆದಿರಲೇ ಇಲ್ಲ. ಆದರೆ ನಾನು ರಾಂಪುರದಿಂದ ಬಂದ ಮೇಲೆ ಆಕೆಯಿಂದ ಹೆಚ್ಚೆಂದರೆ ನಾಲ್ಕಾರು ಪತ್ರಗಳು ಬಂದಿರಬಹುದು' ಎನ್ನುತ್ತಾ ಒಂದು ಕ್ಷಣ ನಿಧಾನಿಸಿ 'ನಾನು ಈಗ ಆಕೆಗೊಂದು ಫೋನು ಕಾಲ್ ಕೊಟ್ಟರೆ ಹೇಗೆ?' ಎಂದು ಕಿಸೆಯಿಂದ ಮೊಬೈಲ್ ತೆಗೆದು ರಿಂಗ್ ಕೊಟ್ಟರು.

ಆ ಕಡೆಯಿಂದ 'ಹಲೋ ಸರ್, ನಾನು ನಿನ್ನೆಯೇ ನಿಮ್ಮ ಫೋನು ಬರಬಹುದು ಎಂದು ನಿರೀಕ್ಷಿಸಿದ್ದೆ. ನೀವು ಮೌನವಾಗಿದ್ದದ್ದು ನೋಡಿ ತುಂಬಾ ಆತಂಕವಾಯ್ತು' ಎಂದಳು ಜಯಂತಿ ಕುಲಕರ್ಣಿ.

ರಾಯರು 'ಸ್ಸಾರಿ ಜಯಂತಿ. ವಿಷಯ ಏನಾಗಿದೆ ಅಂದರೆ?' ಎಂದು ಮೊನ್ನೆ ರಾತ್ರೆ ನಡೆದ ಘಟನೆಗಳನ್ನೆಲ್ಲ ವಿವರಿಸಿ, ನಿನ್ನೆಯ ದಿನ ತಾವು ಪೊಲೀಸ್ ಸ್ಟೇಶನ್ನಿಗೆ ಕೊಟ್ಟ ಕಂಪ್ಲೇಂಟಿನ ವಿಷಯವನ್ನು ತಿಳಿಸಿ, 'ಒಂದೆರಡು ದಿನಗಳ ಕಾಲ ನಾನು ಇಲ್ಲಿಂದ ಹೊರಡುವ ಹಾಗಿಲ್ಲ ಅನಿಸುತ್ತದೆ' ಎಂದರು.

ಜಯಂತಿ ಕುಲಕರ್ಣಿ ರಾಯರ ಮಾತಿನ ಪ್ರತಿಯೊಂದು ವಾಕ್ಯವು ಮುಗಿಯುವ ತನಕ 'ಹ್ಞೂ' 'ಹ್ಞೂ' ಎಂದು ಹೇಳುತ್ತಾ ಬಂದವಳು, ರಾಯರು ಮಾತು ನಿಲ್ಲಿಸುತ್ತಿದ್ದಂತೆ 'ಅಯ್ಯೋ ದೇವರೇ' ಎಂದು ಬಾಯಿ ಬಾಯಿ ಬಡಿದುಕೊಂಡವರಂತೆ